Reg. No. D. 221

# भारत का राजपत्र
# The Gazette of India
# ಭಾರತ ರಾಜ ಪತ್ರ

**(EXTRAORDINARY)**

ವಿಶೇಷ ಸಂಚಿಕೆ


| | |
|---|---|
| भाग–IX | अनुभाग 1 |
| PART IX | SECTION 1 |
| ಭಾಗ IX | ವಿಭಾಗ 1 |

प्राधिकार से प्रकाशित

Published by Authority

ಪ್ರಾಧಿಕಾರದ ಮೇರೆಗೆ ಪ್ರಕಟಿತವಾಗಿದೆ

| | | | |
|---|---|---|---|
| सं–1 | नई दिल्ली सोमवार, नोव्हेंबर 10, 1986 | कार्तिक 19, 1908 (शक) | खण्ड–4 |
| No. 1 | New Delhi Monday, November 10, 1986 | Karthika 19, 1908 (Saka) | Vol. 4 |
| ಸಂಖ್ಯೆ ೧ | ನವದೆಹಲಿ ಸೋಮವಾರ, ನವೆಂಬರ್ ೧೦, ೧೯೮೬ | ಕಾರ್ತೀಕ ೧೯, ೧೯೦೮ (ಶಕ) | ಸಂಪುಟ ೪ |


## MINISTRY OF LAW AND JUSTICE

### (Legislative Department)

New Delhi, September 8, 1986/Bhadrapada 17, 1908 (Sakha)

The translations in Kannada of the following namely — (1) The Public Servants (Inquiries) Act, 1850 (2) The Caste Disabilities Removal Act, 1850 (3) The Dramatic Performances Act, 1876 (4) The Epidemic Diseases Act, 1897 (5) The Police (Incitement to Disaffection) Act, 1922 (6) The Hindu Inheritance (Removal of Disabilities) Act, 1928 (7) The Hindu Gains of Learning Act, 1930 (8) The Arya Marriage Validation Act, 1937 (9) The Employees Liability Act, 1938 (10) The Weekly Holidays Act, 1942 (11) The Foreigners Act, 1946 (12) The Representation of the People (Miscellaneous Provisions) Act, 1956 (13) The Standards of Weights and Measures Act, 1976 (14) The National Library of India Act, 1976–are hereby published under the authority of the President and shall be deemed to be the authorised translations thereof in Kannada under clause (a) of Section 2 of the authorised Translations (Central Laws) Act, 1973 (50 of 1973).

ಕೆಳಕಂಡ ಅಧಿನಿಯಮಗಳು ಎಂದರೆ (೧) ಲೋಕ ನೌಕರರ (ವಿಚಾರಣಾ) ಅಧಿನಿಯಮ, ೧೮೫೦ (೨) ಜಾತಿ ಅಸಮರ್ಥತೆಗಳನ್ನು ತೆಗೆದುಹಾಕುವ ಅಧಿನಿಯಮ, ೧೮೫೦ (೩) ನಾಟಕ ಪ್ರದರ್ಶನ ಅಧಿನಿಯಮ, ೧೮೭೬ (೪) ಸಾಂಕ್ರಾಮಿಕ ರೋಗಗಳ ಅಧಿನಿಯಮ, ೧೮೯೭ (೫) ಪೊಲೀಸು (ಅಪ್ರೀತಿ ಪ್ರಚೋದನಾ) ಅಧಿನಿಯಮ, ೧೯೨೨ (೬) ಹಿಂದೂ ವಾರಸು (ಅಸಮರ್ಥತಾ ನಿವಾರಣಾ) ಅಧಿನಿಯಮ, ೧೯೨೮ (೭) ಹಿಂದೂ ವಿದ್ಯಾರ್ಥನ ಅಧಿನಿಯಮ, ೧೯೩೦ (೮) ಆರ್ಯ ವಿವಾಹ ಮಾನ್ಯೀಕರಣ ಅಧಿನಿಯಮ, ೧೯೩೭ (೯) ನಿಯೋಜಕ ಹೊಣೆಗಾರಿಕೆ ಅಧಿನಿಯಮ, ೧೯೩೮ (೧೦) ವಾರದ ರಜಾ ದಿನ ಅಧಿನಿಯಮ, ೧೯೪೨ (೧೧) ವಿದೇಶಿಯರ ಅಧಿನಿಯಮ, ೧೯೪೬ (೧೨) ಜನತಾ ಪ್ರಾತಿನಿಧ್ಯ (ಸಂಕೀರ್ಣ ಉಪಬಂಧಗಳ) ಅಧಿನಿಯಮ, ೧೯೫೬ (೧೩) ತೂಕ ಮತ್ತು ಅಳತೆ ಮಾನಕ ಅಧಿನಿಯಮ, ೧೯೭೬, (೧೪) ಭಾರತ ರಾಷ್ಟ್ರೀಯ ಗ್ರಂಥಾಲಯ ಅಧಿನಿಯಮ, ೧೯೭೬.

ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಭಾಷಾಂತರಗಳ ಅಧಿನಿಯಮ, ೧೯೭೩ ರ (೧೯೭೩ ರ ೫೦) ೨ನೇ ಪ್ರಕರಣದ, (ಕ) ಖಂಡದ ಮೇರೆಗೆ ಇವುಗಳನ್ನು ಆ ಅಧಿನಿಯಮಗಳ ಅಧಿಕೃತ ಕನ್ನಡ ಭಾಷಾಂತರವೆಂದು ಭಾವಿಸತಕ್ಕದ್ದು.

# ಜನತಾ ಪ್ರಾತಿನಿಧ್ಯ (ಸಂಕೀರ್ಣ ಉಪಬಂಧಗಳ) ಅಧಿನಿಯಮ, 1956

## (1956ರ ಅಧಿನಿಯಮ ಸಂಖ್ಯೆ 88)

## (ಮೇ 1, 1984 ರಂದು ಜಾರಿಯಲ್ಲಿದ್ದಂತೆ)

[ಡಿಸೆಂಬರ್ 28, 1956]

ಸಂಸತ್ತು ಮತ್ತು ರಾಜ್ಯ ವಿಧಾನಮಂಡಲಗಳಿಗೆ ಸದಸ್ಯರಾಗಲು ಮತ್ತು ಅವುಗಳಿಗೆ ನಡೆಯುವ ಚುನಾವಣೆಗಳಲ್ಲಿ ಮತ ಚಲಾಯಿಸಲು ಇರುವ ಅನರ್ಹತೆಗಳನ್ನು ನಿವಾರಿಸುವ ಬಗ್ಗೆ ಮತ್ತು ಅಂತಹ ಚುನಾವಣೆಗಳಿಗೆ ಸಂಬಂಧಿಸಿದ ಕೆಲವು ಸಂಕೀರ್ಣ ವಿಷಯಗಳ ಬಗ್ಗೆ ಉಪಬಂಧಿಸುವ ಅಧಿನಿಯಮ.

ಭಾರತ ಗಣರಾಜ್ಯದ ಏಳನೇ ವರ್ಷದಲ್ಲಿ ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:–

**1. ಸಂಕ್ಷಿಪ್ತ ಹೆಸರು.–** ಈ ಅಧಿನಿಯಮವನ್ನು "ಜನತಾ ಪ್ರಾತಿನಿಧ್ಯ (ಸಂಕೀರ್ಣ ಉಪಬಂಧಗಳ) ಅಧಿನಿಯಮ, 1956" ಎಂದು ಕರೆಯತಕ್ಕದ್ದು.

**2. ಅನರ್ಹತೆಗಳ ನಿವಾರಣೆ.–** (1) (ಇಲ್ಲಿ ಇನ್ನು ಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿತವಾಗುವ) ಜನತಾ ಪ್ರಾತಿನಿಧ್ಯ ಅಧಿನಿಯಮ, 1951 ರ (1951 ರ 43) ಮೇರೆಗೆ ಜನತಾ ಪ್ರಾತಿನಿಧ್ಯ (ಎರಡನೇ ತಿದ್ದುಪಡಿ) ಅಧಿನಿಯಮ, 1956 ರ (1956 ರ 27) ಪ್ರಾರಂಭಕ್ಕೆ ಪೂರ್ವದಲ್ಲಿ ಮೂಲ ಅಧಿನಿಯಮದ 7ನೇ ಪ್ರಕರಣದ (ಗ) ಖಂಡದಲ್ಲಿ ಅಗತ್ಯಪಡಿಸಿರುವಂತೆ ಚುನಾವಣಾ ವೆಚ್ಚಗಳ ವರದಿಯನ್ನು ಒಪ್ಪಿಸಲು ತಪ್ಪಿದುದಕ್ಕಾಗಿ ಯಾವನೇ ವ್ಯಕ್ತಿಯು, ಸಂಸತ್ತಿನ ಅಥವಾ ರಾಜ್ಯ ವಿಧಾನಮಂಡಲದ ಸದಸ್ಯನಾಗುವುದಕ್ಕೆ ಉಂಟಾದ ಪ್ರತಿಯೊಂದು ಅನರ್ಹತೆಯನ್ನು ಈ ಮೂಲಕ ನಿವಾರಿಸಲಾಗಿದೆ.

(2) ಜನತಾ ಪ್ರಾತಿನಿಧ್ಯ (ಎರಡನೇ ತಿದ್ದುಪಡಿ) ಅಧಿನಿಯಮ, 1956 ರ (1956ರ 27) ಪ್ರಾರಂಭಕ್ಕೆ ಪೂರ್ವದಲ್ಲಿ, ಯಾವುದೇ ಕಾನೂನು ವಿರುದ್ಧವಾದ ಆಚರಣೆ ಅಥವಾ ಲಂಚಗುಳಿತನದ ಭ್ರಷ್ಟಾಚರಣೆ ಅಥವಾ ಅನುಚಿತ ಪ್ರಭಾವವಾಗಿರದ ಇತರ ಯಾವುದೇ ಭ್ರಷ್ಟಾಚರಣೆಗಾಗಿ ಮೂಲ ಅಧಿನಿಯಮದ ಮೇರೆಗೆ ಯಾವನೇ ವ್ಯಕ್ತಿಯು ಸಂಸತ್ತಿನ ಅಥವಾ ರಾಜ್ಯದ ವಿಧಾನಮಂಡಲದ ಸದಸ್ಯನಾಗಲು ಅಥವಾ ಚುನಾವಣೆಯಲ್ಲಿ ಮತದಾನ ಮಾಡಲು ಉಂಟಾದ ಪ್ರತಿಯೊಂದು ಅನರ್ಹತೆಯನ್ನು ಈ ಮೂಲಕ ನಿವಾರಿಸಲಾಗಿದೆ.

**3. *[ನಿರಸಿತ]**

**4. [ನಿರಸಿತ]**

---

* 1960ರ ಅಧಿನಿಯಮ ಸಂಖ್ಯೆ 58ರ 2ನೇ ಪ್ರಕರಣದ ಹಾಗೂ ಅನುಸೂಚಿಯ ಮೇರೆಗೆ 3ನೇ ಮತ್ತು 4ನೇ ಪ್ರಕರಣಗಳು ನಿರಸಿತವಾಗಿವೆ.

**5. ಕೆಲವು ಸಂದರ್ಭಗಳಲ್ಲಿ ಸಂಸತ್ತಿನ ಸದಸ್ಯತ್ವಕ್ಕೆ ಇರುವ ಅನರ್ಹತೆಗಳ ನಿವಾರಣೆ.–** ಮಣಿಪುರದ ಮುಖ್ಯ ಕಮೀಷನರವರಿಗೆ ಅಥವಾ ತ್ರಿಪುರದ ಮುಖ್ಯ ಕಮೀಷನರಿಗೆ ಸಂಬಂಧಿಸಿದ ಸಲಹಾ ಪರಿಷತ್ತಿನ ಸದಸ್ಯತ್ವದ ಪದಧಾರಣ ಮಾಡಿರುವ ವ್ಯಕ್ತಿಯು ಸಂಸತ್ತಿನ ಸದಸ್ಯನಾಗಿ ಆಯ್ಕೆಗೊಳ್ಳಲು ಅಥವಾ ಅದರ ಸದಸ್ಯನಾಗಿರಲು ಅನರ್ಹನಾಗುವುದಿಲ್ಲವೆಂದು ಈ ಮೂಲಕ ಘೋಷಿಸಲಾಗಿದೆ.